ಸಾರಾಯಿ ನಿಷೇಧದಿಂದ ಉಂಟಾಗಿರುವ ಅಕ್ರಮ ಮದ್ಯಮಾರಾಟ ತೊಂದರೆ

505 (686) ಶ್ರೀ ನರಸಿಂಹ ಸ್ವಾಮಿ. ಜೆ (ದೊಡ್ಡಬಳ್ಳಾಪುರ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಬಹುತೇಕ ಗ್ರಾಮಗಳಲ್ಲಿ ಸಾರಾಯಿ ನಿಷೇಧದಿಂದ ಉಂಟಾಗಿರುವ ಅಕ್ರಮ ಮದ್ಯ ಮಾರಾಟದಿಂದ ಆಗುತ್ತಿರುವ ತೊಂದರೆಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರಿಂದ ಸರ್ಕಾರದ ಬೊಕ್ಕಸಕ್ಕೆ ಆಗುತ್ತಿರುವ ನಷ್ಟ ಎಷ್ಟು;

ಆ) ಹಾಗಿದ್ದಲ್ಲಿ ಪಾನ ಮುಕ್ತ ಗ್ರಾಮಗಳ ಸರ್ಕಾರದ ಕನಸು ನನಸಾಗಿದೆಯೇ?

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು) :

ಅ) ಸರ್ಕಾರವು ಸಾರಾಯಿ ಮಾರಾಟ ನಿಷೇಧ ನೀತಿಯನ್ನು ಜಾರಿಗೆ ತಂದ ಹಿನ್ನೆಲೆಯಲ್ಲಿ ಬಹುತೇಕ ಗ್ರಾಮಾಂತರ ಪ್ರದೇಶಗಳಲ್ಲಿ ಇದ್ದಂತಹ ಸುಮಾರು 15,248 ಸಾರಾಯಿ ಅಂಗಡಿಗಳು ಮುಚ್ಚಲ್ಪಟ್ಟು, ಪ್ರತಿ ತಿಂಗಳಿಗೆ ಸುಮಾರು 1.5 ಕೋಟಿ ಲೀಟರ್ ಸಾರಾಯಿ ಮಾರಾಟ ನಿಲ್ಲಿಸಲಾಯಿತು. ಅಕ್ರಮ ಮದ್ಯ ಸಮಸ್ಯೆ ನಿವಾರಿಸಲು ಸರ್ಕಾರ ಅನೇಕ ವಿನೂತನ ಯೋಜನೆಗಳನ್ನು ಜಾರಿಗೆ ತಂದಿದೆ. ಸಾರಾಯಿ ಮಾರಾಟ ನಿಷೇಧದ ನಂತರ ಭಾರತೀಯ ಮದ್ಯ ಬಳಕೆ ಪ್ರಮಾಣದಲ್ಲಿ ಹಾಗೂ ತತ್ಸಂಬಂಧ ಆದಾಯ ಕ್ರೋಢೀಕರಣದಲ್ಲಿ ಗಣನೀಯ ಹೆಚ್ಚಳ ಕಂಡುಬಂದಿದ್ದು ಸರ್ಕಾರಕ್ಕೆ ನಷ್ಟವುಂಟಾಗಿರುವುದಿಲ್ಲ.

2006–07ನೇ ಸಾಲಿನಿಂದ 2009–10ನೇ ಸಾಲಿನವರೆಗೆ ಭಾರತೀಯ ಮದ್ಯ ಬಳಕೆ ಹಾಗೂ ಆದಾಯಗಳ ಅಂಕಿ–ಅಂಶಗಳು ಈ ಕೆಳಗಿನಂತಿವೆ.

ವರ್ಷ	ಬಳಕೆ ಪ್ರಮಾಣ (ಲಕ್ಷ ಪೆಟ್ಟಿಗೆಗಳಲ್ಲಿ)	ಆದಾಯ (ಕೋಟಿ ರೂ.ಗಳಲ್ಲಿ)
2006–07	153.61	4.529.00
2007–08	325.48	4811.93
2008–09	365.73	5792.41
2009–10	389.197	7.101.09

ಆ) ಗ್ರಾಮಾಂತರ ಪ್ರದೇಶದಲ್ಲಿ ಸಾರಾಯಿ ಸೇವನೆಯಿಂದ ಸಾರ್ವಜನಿಕರ ಜೀವನ ಮತ್ತು ಗುಣಮಟ್ಟದ ಮೇಲೆ ಪ್ರತಿಕೂಲ ಪರಿಣಾಮವನ್ನು ನಿವಾರಿಸಲು ಸರ್ಕಾರವು ಜೂನ್ 2007 ರಿಂದ ಸಾರಾಯಿ ಮಾರಾಟ ನಿಷೇಧ ನೀತಿಯನ್ನು ಜಾರಿಗೆ ತಂದಿತು ಗ್ರಾಮಾಂತರ ಪ್ರದೇಶದಲ್ಲಿ ಸಾರಾಯಿ ಸೇವನಾ ವ್ಯಸನಿಗಳಾಗಿದ್ದಂತಹ ಬಹುತೇಕ ಮಂದಿಗೆ ಇದರಿಂದ ಅನುಕೂಲವಾಗಿರುತ್ತದೆ. ಇದೇ ಸಮಯದಲ್ಲಿ ಕಳ್ಳಭಟ್ಟಿ ತಯಾರಿಕೆ ಮೇಲೆ ಸಹಾ ಸರ್ಕಾರವು ನಿಯಂತ್ರಣ ಹೊಂದಿದ್ದು. ಸಾರಾಯಿ ಮಾರಾಟ ನಿಷೇಧದ ಧ್ಯೆಯೋದ್ದೇಶಗಳು ಬಹುತೇಕ ನನಸಾಗಿದೆ. ಸಂಪೂರ್ಣ ಪಾನಯುಕ್ತ ನೀತಿಯನ್ನು ಸರ್ಕಾರವು ಎಂದೂ ಪ್ರಸ್ತಾಪಿಸಿರುವುದಿಲ್ಲ.

ಪ್ರೌಢಶಾಲೆ ಆವರಣ ಸೈಕಲ್ ಸ್ಟಾಂಡ್ ನಿರ್ಮಾಣ

506 (687) ಶ್ರೀ ನರಸಿಂಹಸ್ವಾಮಿ ಜಿ (ದೊಡ್ಡಬಳ್ಳಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಪ್ರೌಢಶಾಲಾ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರಿಗೆ ಸೈಕಲ್ ವಿತರಿಸಿರುವುದು ಸರಿಯಾದ ಕ್ರಮವೆ; ಆಯಾಯಾ ಶಾಲಾ ಆವರಣದಲ್ಲಿ ಸೈಕಲುಗಳನ್ನು ನಿಲುಗಡೆ ಮಾಡಲು ಸರ್ಕಾರ ಗಮನ ಹರಿಸಿದೆಯೇ; ಹಾಗಿದ್ದಲ್ಲಿ ಈ ಪ್ರಸ್ತಾಪವನ್ನು ತುರ್ತಾಗಿ ಕೈಗೊಳ್ಳಲು ಸರ್ಕಾರಕ್ಕಿರುವ ಅಡಚಣೆ ಏನು?

ಶ್ರೀ ವಿ.ಎಸ್.ಆಚಾರ್ಯ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಅನುದಾನದ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಈ ಬಗ್ಗೆ ಪರಿಶೀಲಿಸಲಾಗುತ್ತದೆ.